**ದಿನಾಂಕಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ವಕೀಲರಿಂದಃ**

1. ವಿರೇಗೌಡರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ರಾಮಮ್ಮ ಎಂದರೆ ಸರಿ. ಎರಡನೇ ಹೆಂಡತಿ ದೇವಮ್ಮ ಎಂದರೆ ಸರಿ. ರಾಮಮ್ಮರವರಿಗೆ ಒಬ್ಬಳೇ ಮಗಳು. ಆಕೆಯ ಹೆಸರು ಈರಮ್ಮ ಉಃಚಿಕ್ಕೀರಮ್ಮ ಆಗಿರುತ್ತದೆ. ದೇವಮ್ಮ ಈಕೆಗೆ 1ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. ಸಾಕ್ಷಿಯು ಮುಂದುವರಿದು ದತ್ತು ಮಗ ಎಂದು ನುಡಿಯುತ್ತಾರೆ. ನಮ್ಮ ತಾಯಿಗೆ ನಾವು ಒಟ್ಟು 6 ಜನ ಮಕ್ಕಳು. ನಾವು ಒಟ್ಟು 7 ಜನ ಮಕ್ಕಳು ಎಂದರೆ ಹೌದು ಒಬ್ಬರು ತೀರಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಮೊದಲನೇಯವರು ಮಹದೇವಮ್ಮ ಅವರು ತೀರಿಕೊಂಡಿರುತ್ತಾರೆ, ಎರಡನೇಯವರು ಲಿಂಗಮ್ಮ, ಮೂರನೇಯವರು ಬಸಮ್ಮ, ನಾಲ್ಕನೇಯವರು ಗೌರಮ್ಮ, ಐದನೇಯವರು ಶಿವಮಾದು, ಆರನೇಯವರು ಮುದ್ದೇಗೌಡ, ಏಳನೇಯವರು ಮಹದೇವಯ್ಯ.

2. ಪ್ರಸ್ತುತ ದಾವೆಯನ್ನು ನಾನು ಒಬ್ಬನೇ ಹಾಕಿದ್ದು ಉಳಿದ ಆರು ಜನರು ಪಕ್ಷಗಾರರು ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಮನೆಯ ಹಿರಿಯವನಾಗಿದ್ದು ದಾವೆ ಹಾಕಿರುತ್ತೇನೆಂದು ನುಡಿಯುತ್ತಾರೆ. ಉಳಿದ ಆರು ಜನ ದಾವೆಯನ್ನು ನಾನು ಮಾತ್ರ ಹಾಕಲು ಯಾವುದೇ ಪತ್ರ ಬರೆದುಕೊಟ್ಟಿರುವುದಿಲ್ಲ. ದಾವಾ ಸ್ವತ್ತಿನ ಸರ್ವೆ ನಂ.112/3 ಆಗಿದ್ದು 1 ಎಕರೆ 18 ಗುಂಟೆ ವಿಸ್ತೀರ್ಣಕ್ಕೆ ದಾವೆ ಹಾಕಿರುತ್ತೇನೆ. ನಾನು ವ್ಯಾಸಾಂಗ ಮಾಡಿರುವುದಿಲ್ಲ. ನಾನು ದಾವೆ ಹಾಕಲು ಊರಿನವರು ಬಂದು ಮಾಹಿತಿ ಕೊಟ್ಟಿರುತ್ತಾರೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಬಗ್ಗೆ ನನಗೆ ತಿಳಿಸಿರುತ್ತಾರೆ ಆದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ವಕೀಲರಿಗೆ ಮಾಹಿತಿ ನಾನೇ ಕೊಟ್ಟಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

3. ದಿಃ28.08.1989 ರಲ್ಲಿ ವಿಭಾಗ ಪತ್ರವಾಗಿರುವುದಾಗಿ ಹೇಳಿದ್ದು ಸದರಿ ದಾಖಲೆ ಕಳೆದುಹೋಗಿರುತ್ತದೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ

ಯಾರು ಯಾರಿಗೆ ಎಷ್ಟು ವಿಸ್ತೀರ್ಣ ಬಂದಿರುತ್ತದೆಂದು ನೋಡಿರುತ್ತೇನೆ ಆದರೆ ನೆನಪಿರುವುದಿಲ್ಲ. ವಿಭಾಗ ಪತ್ರದಲ್ಲಿ ಗಜದ ಲೆಕ್ಕದಲ್ಲಿ ಸುಮಾರು 7 ರಿಂದ 8 ಗುಂಟೆ ನಮಗೆ ಬಂದಿರುತ್ತದೆ. ಸದರಿ ದಾವಾ ಆಸ್ತಿಯು ನನ್ನ ತಾಯಿಗೆ ಅವರ ಮನೆಯಲ್ಲಿ ಗಂಡು ಮಕ್ಕಳು ಇರಲಿಲ್ಲ ಅದರಂತೆ ಈಕೆಗೆ ಸದರಿ ಆಸ್ತಿಯನ್ನು ಕೊಟ್ಟಿರುತ್ತಾರೆ.

**ಈ ಹಂತದಲ್ಲಿ ಮುಂದುವರಿದ ವಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಆಲಿಸಿ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**